ಕರ್ನಾಟಕ ಉಚ್ಚ ನ್ಯಾಯಾಲಯ

(ಕಲಬುರಗಿ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ವಿ. ಶ್ರೀಶಾನಂದ

ಕೆ. ಅಮರೇಶ್ -ವಿರುದ್ಧ-ಕೆ. ವಿಠೋಬಾ ಮತ್ತು ಮತ್ತೊಬ್ಬರು

ಕ್ರಿಮಿನಲ್ ಅರ್ಜಿಸಂಖ್ಯೆ: 200232/2019, ದಿನಾಂಕ 23 ನೇ ಮಾರ್ಚ್, 2021

ಆಜ್ಞೆ

ನ್ಯಾಯಮೂರ್ತಿ ಶ್ರೀ ವಿ. ಶ್ರೀಶಾನಂದ:

ದಂಡ ಪ್ರಕ್ರಿಯಾ ಸಂಹಿತೆಯ 482 ನೇ ಪ್ರಕರಣದ ಮೇರೆಗಿನ ಈ ಅರ್ಜಿಯಲ್ಲಿ, ಅರ್ಜಿದಾರನು ಈ ಮುಂದಿನ ಮನವಿಯನ್ನು ಮಾಡಿಕೊಂಡಿದ್ದಾನೆ:

"ರಾಯಚೂರಿನ ಮಾನ್ಯ II ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ-IV ಇವರು, ದಂಡ ಪ್ರಕ್ರಿಯಾ ಸಂಹಿತೆಯ 340 ನೇ ಪ್ರಕರಣದ ಅಡಿಯಲ್ಲಿ ಸಲ್ಲಿಸಿದ ಮಧ್ಯಂತರ ಅರ್ಜಿಸಂಖ್ಯೆ: XI ಕುರಿತು ಒ.ಎಸ್.ಸಂಖ್ಯೆ: 106/2011 ರಲ್ಲಿದಿನಾಂಕ: 17.07.2018 ರಂದು ಹೊರಡಿಸಿದ ಆದೇಶವನ್ನು ರದ್ದುಗೊಳಿಸಬೇಕೆಂದು ಮತ್ತು ತತ್ಪರಿಣಾಮವಾಗಿ ನ್ಯಾಯ ಹಾಗೂ ನಿಷ್ಪಕ್ಷಪಾತದ ಹಿತಾಸಕ್ತಿಯಲ್ಲಿ ದಂಡ ಪ್ರಕ್ರಿಯಾ ಸಂಹಿತೆಯ 340 ನೇ ಪ್ರಕರಣದ ಅಡಿಯಲ್ಲಿ ಸಲ್ಲಿಸಿದ ಮಧ್ಯಂತರ ಅರ್ಜಿಸಂಖ್ಯೆ: XI ಕ್ಕೆ ಅನುಮತಿ ನೀಡಬೇಕೆಂದು ಮಾನ್ಯ ನ್ಯಾಯಾಲಯವನ್ನು ವಿನಯಪೂರ್ವಕವಾಗಿ ಮನವಿ ಮಾಡಿಕೊಳ್ಳುತ್ತೇನೆ. "

2. ಅರ್ಜಿಯ ಸಮರ್ಥನೀಯತೆಗೆ ಸಂಬಂಧಿಸಿದಂತೆ ಕಚೇರಿಯು ಯಾವುದೇ ಆಕ್ಷೇಪಣೆಯನ್ನು ಎತ್ತದೇ ಇದ್ದಾಗ್ಯೂ, ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳ ವಾದವನ್ನು ಆಲಿಸುವಾಗ, ಈ ನ್ಯಾಯಾಲಯವು, ದಂಡ ಪ್ರಕ್ರಿಯಾ ಸಂಹಿತೆಯ 482 ನೇ ಪ್ರಕರಣದ ಅಡಿಯಲ್ಲಿ ಅರ್ಜಿಯು ಸಮರ್ಥನೀಯವೇ ಎಂಬ ಸಂಶಯವನ್ನು ವ್ಯಕ್ತಪಡಿಸಿದೆ.

3. ಈ ಅರ್ಜಿಯ ವಿಲೆಗೆ ಅವಶ್ಯವಿರುವ ಸಂಕ್ಷಿಪ್ತ ಸಂಗತಿಗಳು ಈ ಕೆಳಗಿನಂತಿವೆ:

ಇದರಲ್ಲಿನ ಅರ್ಜಿದಾರನು, ರಾಯಚೂರಿನ ರಾಜೇಂದ್ರ ಗಂಜ್ ಮಾರುಕಟ್ಟೆ ಪ್ರಾಂಗಣದಲ್ಲಿ ನಿವೇಶನಗಳ ಹಂಚಿಕೆಯು ಕಾನೂನುಬಾಹಿರವೆಂಬ ಘೋಷಣೆಯ ಪರಿಹಾರಕ್ಕಾಗಿ ರಾಯಚೂರಿನ ಕೃಷಿ ಉತ್ಪನ ಮಾರುಕಟ್ಟೆ ಸಮಿತಿ ಮತ್ತು ಇತರರ ವಿರುದ್ಧ ರಾಯಚೂರಿನ ಮಾನ್ಯ II ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ-IV ಇವರ ಕಡತದಲ್ಲಿನ ಒ. ಎಸ್.ಸಂಖ್ಯೆ: 106/2011 ರಲ್ಲಿ ಮೂಲ ದಾವೆಯನ್ನು ಸಲ್ಲಿಸಿದ್ದಾನೆ.ಇತರ ವಿಷಯಗಳ ಜೊತೆಗೆ, ಮೊದಲನೇ ಎದುರುದಾರ-ಕೆ.ವಿಠೋಬಾ ಬಿನ್ ಕೆ. ಉರುಕುಂಡಯ್ಯ ಎಂಬಾತನು ಉದ್ದೇಶಪೂರ್ವಕವಾಗಿ ಅಧಿವಿಚಾರಣಾ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯವನ್ನು ನೀಡಿರುವುದರಿಂದ ಆತನ ವಿರುದ್ಧ ಕ್ರಿಮಿನಲ್ ವ್ಯವಹರಣೆಗಳನ್ನು ಪ್ರಾರಂಭಿಸಲು ವಾದಕಾಲೀನ ಅರ್ಜಿಸಂಖ್ಯೆ: XI ರ ಮೂಲಕ ದಂಡ ಪ್ರಕ್ರಿಯಾ ಸಂಹಿತೆಯ 340 ನೇ ಪ್ರಕರಣದ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿದ್ದಾನೆ.ಸದರಿ ಅರ್ಜಿಯನ್ನು ಮೊದಲನೇ ಎದುರುದಾರನು ವಿರೋಧಿಸಿದ್ದನು.ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರು, ಪಕ್ಷಕಾರರ ವಾದಗಳನ್ನು ಆಲಿಸಿದ ನಂತರ,ದಿನಾಂಕ: 17.07.2018 ರ ಆದೇಶದ ಮೂಲಕ ಅರ್ಜಿಯನ್ನು ವಜಾಗೊಳಿಸಿದ್ದಾರೆ.ಇದರಿಂದ ಬಾಧಿತನಾಗಿ, ಸದರಿ ಆದೇಶವನ್ನು ರದ್ದುಗೊಳಿಸಲು ಮತ್ತು ಅರ್ಜಿಯನ್ನು ಪುರಸ್ಕರಿಸಲು ಕೋರಿ ಅರ್ಜಿದಾರನು ಈ ನ್ಯಾಯಾಲಯದ ಮುಂದೆ ಬಂದಿದ್ದಾನೆ.

4. ಅರ್ಜಿಯ ಸಮರ್ಥನೀಯತೆಗೆ ಸಂಬಂಧಪಡುವಷ್ಟರಮಟ್ಟಿಗೆ, ಅರ್ಜಿದಾರರ ಪರ ಮಾನ್ಯ ನ್ಯಾಯವಾದಿ ಶ್ರೀ ಮಹಂತೇಶ್ ಪಾಟೀಲ್ರವರು, ದಂಡ ಪ್ರಕ್ರಿಯಾ ಸಂಹಿತೆಯ 195 ನೇ, 340 ನೇ ಮತ್ತು 341 ನೇ ಪ್ರಕರಣಗಳ

ಉಪಬಂಧಗಳೆಡೆಗೆ ಈ ನ್ಯಾಯಾಲಯದ ಗಮನ ಸೆಳೆದಿದ್ದಾರೆ.ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳ ಪ್ರಕಾರ, ನ್ಯಾಯಾಲಯವು ವ್ಯವಹರಣೆಗಳಿಗೆ ಸಂಬಂಧಿಸಿದ ಪಕ್ಷಕಾರರು ಸುಳ್ಳು ಸಾಕ್ಷ್ಯ ಎ ನುಡಿದಿದ್ದಾರೆ ಎಂಬುದು ಮೇಲ್ನೋಟಕ್ಕೆ ಕಂಡುಬಂದ ನಂತರ, ಸಂಬಂಧಪಟ್ಟ ಮ್ಯಾಜಿಸ್ಟ್ರೇಟ್ ನ್ಯಾಯಾಲಯಕ್ಕೆ ವಿಷಯವನ್ನು ಉಲ್ಲೇಖಿಸುವುದು ಮತ್ತು ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಮುಂದೆ ಸುಳ್ಳು ಸಹಿ ಮಾಡಿದ ಅಪರಾಧಕ್ಕಾಗಿ ಕ್ರಿಮಿನಲ್ ದೂರನ್ನು ಸಲ್ಲಿಸಲು ಆ ನ್ಯಾಯಾಲಯ ಸಕ್ಷಮ ಅಧಿಕಾರಿಗೆ ನಿರ್ದೇಶಿಸುವುದು ಅಗತ್ಯವಾಗಿತ್ತು.ಅವರ ಪ್ರಕಾರ, ಅಂಥ ಅಧಿಕಾರವನ್ನು ಚಲಾಯಿಸುವುದಕ್ಕಾಗಿ, ಯಾವ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯವನ್ನು ನುಡಿಯಲಾಗಿತ್ತೋ, ಆ ನ್ಯಾಯಾಲಯವು ಅಂತರ್ನಿಹಿತ ಅಧಿಕಾರ ಮತ್ತು ವ್ಯಾಪ್ತಿಯನ್ನು ಹೊಂದಿದ್ದು, ಆ ಉದ್ದೇಶಕ್ಕಾಗಿ ಪ್ರತಿಯೊಂದು ನ್ಯಾಯಾಲಯವನ್ನು ಕ್ರಿಮಿನಲ್ ನ್ಯಾಯಾಲಯವೆಂದು ಪರಿಗಣಿಸಬಹುದಾಗಿದೆ.ವಾದಕಾಲೀನ ಅರ್ಜಿಸಂಖ್ಯೆ: XI ನ್ನು ವಜಾಗೊಳಿಸುವುದಕ್ಕೆ ಸಂಬಂಧಿಸಿದಂತೆ ಪ್ರಸ್ತುತ ಮೊಕದ್ದಮೆಯಲ್ಲಿ ಅಧಿವಿಚಾರಣಾ ನ್ಯಾಯಾಲಯವು ಅಂಥ ಅಧಿಕಾರವನ್ನು ಚಲಾಯಿಸಿಲ್ಲದೆ ಇರುವುದರಿಂದ, ದಂಡ ಪ್ರಕ್ರಿಯಾ ಸಂಹಿತೆಯ 482 ನೇ ಪ್ರಕರಣದ ಅಡಿಯಲ್ಲಿ ಈ ನ್ಯಾಯಾಲಯದ ಅಂತರ್ನಿಹಿತ ಅಧಿಕಾರವ್ಯಾಪ್ತಿಗೆ ಒಳಪಡುತ್ತದೆ.ಒಪ್ಪಿಕೊಂಡಿರುವಂತೆ ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ಆದೇಶವು ತಪ್ಪಾದುದಾಗಿದೆ.

5. ಆದಾಗ್ಯೂ, ಈ ನ್ಯಾಯಾಲಯವು ವ್ಯವಹರಣೆಗಳ ಸಮರ್ಥನೀಯತೆ ಬಗ್ಗೆ ಸಂಶಯವನ್ನು ಎತ್ತಿರುವುದರಿಂದ, ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಯು ಈ ಸಂಬಂಧದಲ್ಲಿ ವಿಚಾರಿಸಲು ಮತ್ತು ಸಮುಚಿತವಾದ ನಿವೇದನೆಗಳನ್ನು ಸಲ್ಲಿಸಲು ಸಮಯ ತೆಗೆದುಕೊಂಡರು.ದಿನಾಂಕ: 10.01.2019 ರ ಕ್ರಿಮಿನಲ್ ಸಂಕೀರ್ಣ ಮೊಕದ್ದಮೆಸಂಖ್ಯೆ: 8438/2018 ರಲ್ಲಿ, ಶಿಬು ಜಾರ್ಜ್ ವಿರುದ್ಧ ಜಿಜಿಮೋನ್ ಮತ್ತು ಇನ್ನೊಬ್ಬರು 1 ' ಮೊಕದ್ದಮೆಯಲ್ಲಿ ಕೇರಳ ಉಚ್ಚ ನ್ಯಾಯಾಲಯವು ಹೊರಡಿಸಿದ ತೀರ್ಪನ್ನು ಕಂಡುಕೊಳ್ಳಲು ಅವರು ಶಕ್ತರಾಗಿರುವರೆಂದು ಈ ನ್ಯಾಯಾಲಯದ ಮುಂದೆ ಅವರು ಸಾಕಷ್ಟು ನ್ಯಾಯಯುತವಾಗಿ ನಿವೇದಿಸಿಕೊಂಡಿರುವರು.ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ಸದರಿ ತೀರ್ಪಿನ ಪ್ರತಿಯನ್ನು ದೊರಕಿಸಿಕೊಟ್ಟಿದ್ದಾರೆ.ಸದರಿ ತೀರ್ಪಿನ ಸುಸಂಗತ ಭಾಗವನ್ನು ಈ ಕೆಳಗಿನಂತೆ ಓದಲಾಗಿದೆ:

"7. ದಂಡ ಪ್ರಕ್ರಿಯಾ ಸಂಹಿತೆಯ 340 ನೇ ಪ್ರಕರಣವು, 195 ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಮೊಕದ್ದಮೆಗಳಲ್ಲಿ ಅನುಸರಿಸಬೇಕಾದ ಪ್ರಕ್ರಿಯೆಯನ್ನು ನಿಯಮಿಸುತ್ತದೆ.ಯಾವ ನ್ಯಾಯಾಲಯದಲ್ಲಿ ಎಸಗಲಾದ ಅಪರಾಧದ ಸ ಂ ಬ ಂ ಧದಲ್ಲಿನ ವ್ಯವಹರಣೆಗಳು ಇತ್ಯರ್ಥದಲ್ಲಿರುವವೋ, ಆ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಬೇಕು.340 ನೇ ಪ್ರಕರಣದ ( 4) ನೇ ಉಪ-ಪ್ರಕರಣವು, ಈ ಪ್ರಕರಣದಲ್ಲಿ ನ್ಯಾಯಾಲಯವು, 195 ನೇ ಪ್ರಕರಣದಲ್ಲಿರುವಂಥದೇ ಅರ್ಥವನ್ನು ಹೊಂದಿದೆ ಎಂದು ಉಪಬಂಧಿಸುತ್ತದೆ.

8. ಸಂಹಿತೆಯ 341 ನೇ ಪ್ರಕರಣವನ್ನು ಈ ಮುಂದಿನಂತೆ ಓದಲಾಗಿದೆ:

" (1) ಉಚ್ಚ ನ್ಯಾಯಾಲಯವಲ್ಲದ ಯಾವುದೇ ನ್ಯಾಯಾಲಯವು ಚ ಯಾರ ಅರ್ಜಿಯ ಮೇರೆಗೆ 340 ನೇ ಪ್ರಕರಣದ ( 1) ನೇ ಅಥವಾ ( 2) ನೇ ಉಪ-ಪ್ರಕರಣದ ಮೇರೆಗೆ ಫಿರ್ಯಾದನ್ನು ಮಾಡಲು ತಿರಸ್ಕರಿಸಿದೆಯೋ ಅಥವಾ ಯಾರ ವಿರುದ್ಧ ಅಂತಹ ಫಿರ್ಯಾದನ್ನು ಅಂತಹ ನ್ಯಾಯಾಲಯವು ಮಾಡಿದೆಯೋ, ಆ ಯಾರೇ ವ್ಯಕ್ತಿಯು ಯಾವ ನ್ಯಾಯಾಲಯಕ್ಕೆ ಅಂತಹ ಮೊದಲಿನ ನ್ಯಾಯಾಲಯವು ಕ್ರಿಮಿನಲ್ ಸಂಕೀರ್ಣ ಮೊಕದ್ದಮೆಸಂಖ್ಯೆ: 8438/2018, ದಿನಾಂಕ 10-1-2019, 195ನೇ ಪ್ರಕರಣದ (4) ನೇ ಉಪ-ಪ್ರಕರಣದ ಅರ್ಥದ ಮಿತಿಯೊಳಗೆ ಅಧೀನವಾಗಿದೆಯೋ, ಆ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಬಹುದು ಮತ್ತು ಅನಂತರ ವರಿಷ್ಠ ನ್ಯಾಯಾಲಯವು ಸಂಬಂಧಪಟ್ಟ ಎ ಪಕ್ಷಕಾರರಿಗೆ ನೋಟೀಸು ನೀಡಿದ ನಂತರ, ಸಂದರ್ಭಾನುಸಾರ, ಫಿರ್ಯಾದನ್ನು ಹಿಂತೆಗೆದುಕೊಳ್ಳಲು ಅಥವಾ 340 ನೇ ಪ್ರಕರಣದ ಮೇರೆಗೆ ಅಂತಹ ಮೊದಲಿನ ನ್ಯಾಯಾಲಯವು ಮಾಡಬಹುದಾಗಿದ್ದ ಫಿರ್ಯಾದನ್ನು ಸಲ್ಲಿಸಲು ನಿರ್ದೇಶಿಸಬಹುದು ಮತ್ತು ಅದು ಅಂತಹ ಫಿರ್ಯಾದನ್ನು ಸಲ್ಲಿಸಿದರೆ, ಆ ಆ ಪ್ರಕರಣದ ಉಪಬಂಧಗಳು ತದನುಸಾರವಾಗಿ ಅನ್ವಯವಾಗತಕ್ಕದ್ದು.

(2) ಈ ಪ್ರಕರಣದ ಮೇರೆಗಿನ ಆದೇಶವು ಮತ್ತು ಅಂತಹ ಯಾವುದೇ ಆದೇಶಕ್ಕೊಳಪಟ್ಟು 340 ನೇ ಪ್ರಕರಣದ ಮೇರೆಗಿನ ಆದೇಶವು ಅಂತಿಮವಾಗಿರತಕ್ಕದ್ದು ಮತ್ತು ಪುನರೀಕ್ಷಣೆಗೆ ಒಳಪಡತಕ್ಕದ್ದಲ್ಲ."

9. ಎಂ. ಎಸ್. ಷರೀಫ್ -ವಿರುದ್ಧ-ಮದ್ರಾಸ್ [ಎಐಆರ್ 1954 ಎಸ್ಸಿ 397) ಮೊಕದ್ದಮೆಯಲ್ಲಿ, ಭಾರತ ದಂಡ ಸಂಹಿತೆಯ (1898 ರ ಸಂಹಿತೆ) 193 ನೇ ಪ್ರಕರಣದ ಅಡಿಯಲ್ಲಿ ಸುಳ್ಳು ಸಾಕ್ಷ್ಯಕ್ಕಾಗಿ ಇಬ್ಬರು ಪೊಲೀಸ್ ಅಧಿಕಾರಿಗಳನ್ನು ಪ್ರಾಸಿಕ್ಯೂಟ್ ಮಾಡಲು ಉಚ್ಚ ನ್ಯಾಯಾಲಯವನ್ನು ಕೋರಿ ದಂಡ ಪ್ರಕ್ರಿಯಾ ಸಂಹಿತೆಯ ಚ 475 ನೇ ಪ್ರಕರಣದ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಲಾಗಿತ್ತು.ಮೊಕದ್ದಮೆಯ ಸಂಗತಿಗಳು ಸುಸಂಗತವಾಗಿವೆ.ಸರ್ವೋಚ್ಚ ನ್ಯಾಯಾಲಯದ ಮುಂದೆ ಎತ್ತಿದ ಪ್ರಶ್ನೆಯು ನ್ಯಾಯಾಲಯದಲ್ಲಿದ್ದು, ಉಚ್ಚ ನ್ಯಾಯಾಲಯವು (ವಿಭಾಗೀಯ ಪೀಠ) ಹೊರಡಿಸಿದ ಆದೇಶದ ಚ ವಿರುದ್ಧ ಅಪೀಲು ಸಲ್ಲಿಸಬೇಕಿದೆ.ನ್ಯಾಯಾಲಯವು ಉಪಬಂಧದ ಸುಸಂಗತ ಭಾಗವನ್ನು ಗಮನಕ್ಕೆ ತೆಗೆದುಕೊಂಡಿದ್ದು, (ಹಳೆಯ ಸಂಹಿತೆಯ 476 ಬಿ ಪ್ರಕರಣ) ಸಂಬಂಧಪಟ್ಟ ಅಪೀಲನ್ನು ಈ ಮುಂದಿನಂತೆ ಓದಲಾಗಿದೆ:

ದೂರನ್ನು ಸಲ್ಲಿಸಿದ ಯಾರೇ ವ್ಯಕ್ತಿಯು " 195 (3) ನೇ ಪ್ರಕರಣದ (ಹಳೆಯ ಸಂಹಿತೆ) ಅರ್ಥವ್ಯಾಪ್ತಿಯೊಳಗೆ ನ್ಯಾಯಾಲಯಕ್ಕೆ ಅಪೀಲನ್ನು ಸಲ್ಲಿಸಬಹುದು.ಆದ್ದರಿಂದ 195 ( 3) ನೇ ಪ್ರಕರಣವನ್ನು ಹೀಗೆ ಓದಲಾಗಿದೆ: "ಈ ಪ್ರಕರಣದ ಉದ್ದೇಶಕ್ಕಾಗಿ ನ್ಯಾಯಾಲಯವು, ಅಪೀಲು ಸಲ್ಲಿಸಬಹುದಾದ ಡಿಕ್ರಿಯಿಂದ ಅಥವಾ ಅಂಥ ಹಿಂದಿನ ನ್ಯಾಯಾಲಯದ ಶಿಕ್ಷೆಗಳಿಂದ ಸಾಮಾನ್ಯವಾಗಿ ಯಾವ ನ್ಯಾಯಾಲಯಕ್ಕೆ ಕ ಅಪೀಲುಗಳನ್ನು ಸಲ್ಲಿಸ ಬಹುದೊ, ಆ ನ್ಯಾಯಾಲಯಕ್ಕೆ ಅಧೀನವಾಗಿದೆಯೆಂದು ಭಾವಿಸತಕ್ಕದ್ದು ...... ಇದು 1973 ರ ಸಂಹಿತೆಯ 195 ( 4) ನೇ ಪ್ರಕರಣದಲ್ಲಿನ ಉಪಬಂಧಕ್ಕೆ ಸಮಾನವಾದುದಾಗಿದೆ.ಸರ್ವೋಚ್ಚ ನ್ಯಾಯಾಲಯವು ಹೀಗೆ ಚ ಅಭಿಪ್ರಾಯಪಟ್ಟಿದೆ: "ನಾವು ಪರಿಭಾಷೆಯನ್ನು ಅನ್ವಯಿಸುವ ಮೊದ ಲು, ಯಾ ವ ಪರಿಗಣನಾ ೦ ಶಗಳಿಗೆ ಅಪೀಲು ಮುಕ್ತವಾಗಿರುವುದೋ ಆ ಪರಿಗಣನಾ ೦ ಶಗಳ ಮೇರೆಗೆ ನ್ಯಾಯಾಲಯದಲ್ಲಿ ಡಿಗ್ರಿಗಳ ಅಥವಾ ಶಿಕ್ಷೆಗಳ ಪ್ರವರ್ಗವಿದೆಯೇ?ಎಂಬುದನ್ನು ನಾವು ಮೊದಲು ನೋಡಬೇಕಾಗುತ್ತದೆ.ಪರಿಗಣನಾಂಶಗಳಿಲ್ಲದಿದ್ದರೆ, ವಿಷಯವು ಕೊನೆಗೊಳ್ಳುತ್ತದೆ ಮತ್ತು 476 ಬಿ ಪ್ರಕರಣದ ಅಡಿಯಲ್ಲಿ ಅಪೀಲಿನ ಹಕ್ಕು ಇರುವುದಿಲ್ಲ.ಪರಿಗಣನಾಂಶಗಳಿದ್ದರೆ, ಆಗ, ಆ ಅಪೀಲುಗಳು " ಸಾಮಾನ್ಯವಾಗಿ " ಯಾವ ಪರಿಗಣನಾಂಶಗಳಲ್ಲಿ ಬರುತ್ತವೆ ಎಂಬುದನ್ನು ನಾವು ನೋಡಬೇಕಾಗುತ್ತದೆ.”

10. ಕುಲದೀಪ್ ಸಿಂಗ್ -ವಿರುದ್ಧ-ಪಂಜಾಬ್ ರಾಜ್ಯ [ಎಐಆರ್ 1956 ಎಸ್ಸಿ 391] ಇದು, ಭಾರತ ದಂಡ ಸಂಹಿತೆಯ 193ನೇ ಪ್ರಕರಣದ ಅಡಿಯಲ್ಲಿ ಅಪರಾಧ ಎಸಗಿರುವನೆ ೦ ದು ಆಪಾದಿತನಾಗಿರುವ ಪಕ್ಷಕಾರನ ವಿರುದ್ಧ ದೂರನ್ನು ಸಲ್ಲಿಸಲು ಅಧೀನ ನ್ಯಾಯಾಧೀಶರನ್ನು (ಪ್ರಥಮ ದರ್ಜೆ) ಕೋರಿ ದಾವೆಯನ್ನು ಸಲ್ಲಿಸಿದ ಅರ್ಜಿಯಲ್ಲಿ ಆತನು ಹೊರಡಿದ ಆದೇಶದಿಂದ ಉದ್ಭವಿಸಿದ ಮೊಕದ್ದಮೆಯಾಗಿದೆ.ಪಂಜಾಬ್ ನ್ಯಾಯಾಲಯಗಳ ಅಧಿನಿಯಮದ ಮೇರೆಗೆ, ಜಿಲ್ಲಾ ನ್ಯಾಯಾಧೀಶರ ಮತ್ತು ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರ ನ್ಯಾಯಾಲಯಗಳು ಎಂಬ ಎರಡು ವರ್ಗಗಳ ನ್ಯಾಯಾಲಯಗಳಿದ್ದವು.ಆ ಎರಡು ನ್ಯಾಯಾಲಯಗಳಲ್ಲಿ ಯಾವ ನ್ಯಾಯಾಲಯವು, ಅಧೀನ ನ್ಯಾಯಾಧೀಶರು ಹೊರಡಿಸಿದ ಆದೇಶದ ವಿರುದ್ಧ ಸಲ್ಲಿಸಿದ ಅಪೀಲನ್ನು ಪುರಸ್ಕರಿಸಲು ಅಧಿಕಾರವ್ಯಾಪ್ತಿ ಹೊಂದಿತ್ತು ಎಂಬುದು ಸರ್ವೋಚ್ಚ ನ್ಯಾಯಾಲಯವು ಪರಿಗಣಿಸಿದ ಪ್ರಶ್ನೆಯಾಗಿತ್ತು.ದಂಡ ಪ್ರಕ್ರಿಯಾ ಸಂಹಿತೆ ಮತ್ತು ಪಂಜಾಬ್ ನ್ಯಾಯಾಲಯಗಳ ಅಧಿನಿಯಮದಲ್ಲಿನ ಉಪಬಂಧಗಳನ್ನು ಪರಾಮರ್ಶಿಸಿದ ನಂತರ, ಸರ್ವೋಚ್ಚ ನ್ಯಾಯಾಲಯವು ಈ ರೀತಿ ಚ ಅಭಿಪ್ರಾಯಪಟ್ಟಿತು:

"ಈ ಅಧಿಕಾರಗಳನ್ನು ಚಲಾಯಿಸಲು ಸಕ್ಷಮವಾಗಿರುವ ನ್ಯಾಯಾಲಯವು, ಯಾವ ನ್ಯಾಯಾಲಯಕ್ಕೆ" ಸಾಮಾನ್ಯವಾಗಿ" ಅಪೀಲುಗಳನ್ನು ಸಲ್ಲಿಸಲಾಗಿತ್ತೋ, ಆ ನ್ಯಾಯಾಲಯವು ಮೂಲ ನ್ಯಾಯಾಲಯವಾಗಿರುತ್ತದೆ.ಪ್ರಸ್ತುತ ಮೊಕದ್ದಮೆಯಲ್ಲಿ ಆ ನ್ಯಾಯಾಲಯವು, ಜಿಲ್ಲಾ ನ್ಯಾಯಾಧೀಶರ ನ್ಯಾಯಾಲಯವಾಗಿತ್ತೇ ಹೊರತು ಹೆಚ್ಚುವರಿ ನ್ಯಾಯಾಧೀಶರ ನ್ಯಾಯಾಲಯವಲ್ಲ ".

11. ಮೇಲಿನ ಎರಡು ನಿರ್ಣಯಗಳನ್ನು, ಸರ್ವೋಚ್ಚ ನ್ಯಾಯಾಲಯದ ಚ ಐವರು ನ್ಯಾಯಾಧೀಶರ ಪೀಠವು ನೀಡಿತ್ತು.

12. ಹರಿಶಂಕರ್ –ವಿರುದ್ಧ-ಖ್ಯಾಲಿಚಂದ್ರು [1991 ಸಿಆರ್ಎಲ್.ಎಲ್.ಜೆ.2153] ಮೊಕದ್ದಮೆಯಲ್ಲಿ, ಸಿವಿಲ್ ನ್ಯಾಯಾಲಯದ ನಿರ್ಣಯವನ್ನು ಪ್ರಶ್ನಿಸಿ ದಂಡ ಪ್ರಕ್ರಿಯಾ ಸಂಹಿತೆಯ 341 ನೇ ಪ್ರಕರಣದ ಅಡಿಯಲ್ಲಿ ಉಪಬಂಧಿಸಿದ ಅಪೀಲು, ದಂಡ ಪ್ರಕ್ರಿಯಾ ಸಂಹಿತೆಯ ಅಡಿಯಲ್ಲಿ ಅಪೀಲು ಅಧಿಕಾರಗಳನ್ನು ಚಲಾಯಿಸುವ ನ್ಯಾಯಾಲಯದ ಇತ್ಯರ್ಥಕ್ಕೆ ಬರುವುದೇ ಅಥವಾ ಸಿವಿಲ್ ನ್ಯಾಯಾಲಯಗಳ ಅಧಿನಿಯಮದ ಮೇರೆಗೆ ಅಪೀಲು ಅಧಿಕಾರವನ್ನು ಚಲಾಯಿಸುವ ನ್ಯಾಯಾಲಯದ ಇತ್ಯರ್ಥಕ್ಕೆ ಬರುವುದೇ ಎಂಬ ಪ್ರಶ್ನೆಯು, ಮಧ್ಯ

ಪ್ರದೇಶದ ಉಚ್ಚ ನ್ಯಾಯಾಲಯದ ಮುಂದೆ ಪರಿಗಣನೆಗಾಗಿ ಬಂದಿತ್ತು.ಚ ಭಿಷಮಭಾಸ್ -ವಿರುದ್ಧ ಮುಕ್ತಾ [ಎಐಆರ್ 1942 ನಾಗ್ಪುರ 73], ಗಣಪತ್ಲಾಲ್ -ವಿರುದ್ಧ-ಲಾಯಕ್ಚಂದ್ [1980 ಜೆಎಬಿ ಎಲ್ಜೆ 146] ಮೊಕದ್ದಮೆಯಲ್ಲಿ ಮಧ್ಯ ಪ್ರದೇಶ ಉಚ್ಚ ಚ ನ್ಯಾಯಾಲಯದ ನಿರ್ಣಯಗಳನ್ನು, ದಿಯೋನಂದನ್ ಸಿಂಗ್-ವಿರುದ್ಧ ರಾಮ್ಲಖನ್ ಸಿಂಗ್ [ಎಐಆರ್ 1948 ಪಾಟ್ನಾ 225] ಮೊಕದ್ದಮೆಯಲ್ಲಿ ಪಾಟ್ನಾ ಉಚ್ಚ ನ್ಯಾಯಾಲಯದ ಪೂರ್ಣ ಪೀಠದ ಚ ನಿರ್ಣಯಗಳನ್ನು ಹಾಗೂ ಮೇಲೆ ಉಲ್ಲೇಖಿಸಿದ ಸರ್ವೋಚ್ಚ ನ್ಯಾಯಾಲಯದ ಐವರು ನ್ಯಾಯಾಧೀಶರ ಪೀಠದ ನಿರ್ಣಯಗಳನ್ನು ಮಾನ್ಯ ನ್ಯಾಯಾಧೀಶರು ಉಲ್ಲೇಖಿಸಿದರು ಹಾಗೂ ಸಿವಿಲ್ ನ್ಯಾಯಾಲಯವು ಹೊರಡಿಸಿದ ಆದೇಶವನ್ನು, ಸಿವಿಲ್ ನ್ಯಾಯಾಲಯಗಳ ಅಧಿನಿಯಮದ ಅಡಿಯಲ್ಲಿ ಸ್ಥಾಪಿಸಲಾದ ಅಪೀಲು ನ್ಯಾಯಾಲಯದಲ್ಲಿ ಮಾತ್ರವೇ ಪ್ರಶ್ನಿಸಬಹುದೇ ಹೊರತು, ದಂಡ ಪ್ರಕ್ರಿಯಾ ಸಂಹಿತೆಯ ಅಡಿಯಲ್ಲಿನ ಅಧಿಕಾರಗಳನ್ನು ಚಲಾಯಿಸುವ ನ್ಯಾಯಾಲಯದಲ್ಲಿ ಅಲ್ಲವೆಂದು ಅಭಿಪ್ರಾಯಪಟ್ಟರು.

13. ಜೋಸೆ ಜೋಸೆಫ್ ವಿರುದ್ಧ ಸಿಂಡಿಕೇಟ್ ಬ್ಯಾಂಕ್ [1997 ( 1) ಕೆಎಲ್ಟಿ 320] ಮೊಕದ್ದಮೆಯಲ್ಲಿ, ಅಧೀನ ನ್ಯಾಯಾಧೀಶರು ಪ್ರಶ್ನಿತ ಆದೇಶವನ್ನು ಹೊರಡಿಸಿದ್ದರು.ಅಪೀಲನ್ನು ಪುರಸ್ಕರಿಸಲು ಜಿಲ್ಲಾ ನ್ಯಾಯಾಲಯ ಅಥವಾ ಉಚ್ಚ ನ್ಯಾಯಾಲಯವು ಅಧಿಕಾರವ್ಯಾಪ್ತಿ ಹೊಂದಿದೆಯೇ ಎಂಬುದು ಪರಿಗಣನೆಗೆ ಬಂದಂಥ ಪ್ರಶ್ನೆಯಾಗಿತ್ತು.ದಂಡ ಪ್ರಕ್ರಿಯಾ ಸಂಹಿತೆಯ 195 ನೇ ಪ್ರಕರಣದ ( 4) ನೇ ಉಪ-ಪ್ರಕರಣದಲ್ಲಿನ ಉಪಬಂಧಗಳ ಮೇರೆಗೆ ಸಿಆರ್ಪಿಸಿಯ 341 ನೇ ಪ್ರಕರಣದ ಅಡಿಯಲ್ಲಿನ ಅಪೀಲನ್ನು ಜಿಲ್ಲಾ ನ್ಯಾಯಾಲಯದಲ್ಲಿ ಪುರಸ್ಕರಿಸಬಹುದಾಗಿದೆ ಎಂದು ವಿಭಾಗೀಯ ಪೀಠವು ಅಭಿಪ್ರಾಯ ಪಟ್ಟಿತು.

14. ಈ ವ್ಯವಹರಣೆಗಳಲ್ಲಿ ಪರಿಗಣನೆಗೆ ಉದ್ಭವಿಸುವ ಪ್ರಶ್ನೆಯನ್ನು, ಸುಭಾಷ್ -ವಿರುದ್ಧ-ರಾಜಸ್ಥಾನ ರಾಜ್ಯ [2014 ಕೆಹೆಚ್ಸಿ 2125] ಮೊಕದ್ದಮೆಯಲ್ಲಿ, ರಾಜಸ್ಥಾನ ಉಚ್ಚ ನ್ಯಾಯಾಲಯವು ಪರಿಗಣಿಸಿ, ಈ ಮುಂದಿನಂತೆ ಅಭಿಪ್ರಾಯಪಟ್ಟಿತ್ತು:

"ದಂಡ ಪ್ರಕ್ರಿಯಾ ಸಂಹಿತೆಯ 340 ನೇ ಪ್ರಕರಣದ ಅಡಿಯಲ್ಲಿ ಯಾವುದೇ ದೂರನ್ನು ದಾಖಲಿಸಲು ಸಿವಿಲ್ ನ್ಯಾಯಾಲಯವು ನಿರಾಕರಿಸಿದಾಗ, ಬಾಧಿತ ಪಕ್ಷಕಾರನು ಅಪೀಲನ್ನು, ಸಿವಿಲ್ ಕಡೆಯ ಅಪೀಲು ನ್ಯಾಯಾಲಯದಲ್ಲಿ ಮಾತ್ರ ಸಲ್ಲಿಸಬಹುದಾಗಿದೆಯೇ ಹೊರತು ಕ್ರಿಮಿನಲ್ ಕಡೆಯ ಅಪೀಲು ನ್ಯಾಯಾಲಯದಲ್ಲಿ ಅಲ್ಲ.

15. ಈ ನ್ಯಾಯಾಲಯದ ಮಾನ್ಯ ಏಕಪೀಠ ನ್ಯಾಯಾಧೀಶರು ಸಹ, ರಾಕಿ -ವಿರುದ್ಧ-ಪವುಣ್ಣಿ [2015 ( 1) ಕೆಎಲ್ಟಿ 547] ಮೊಕದ್ದಮೆಯಲ್ಲಿನ ಪ್ರಶ್ನೆಯನ್ನು ಪರಿಗಣಿಸುವ ಸಂದರ್ಭವನ್ನು ಹೊಂದಿದ್ದರು.ಮುನ್ಸಿಫ್ ನ್ಯಾಯಾಲಯವು ಹೊರಡಿಸಿದ ಆದೇಶವನ್ನು ಸತ್ರ ನ್ಯಾಯಾಲಯದಲ್ಲಿ ಸಲ್ಲಿಸಿದ ಅಪೀಲಿನಲ್ಲಿ ಪ್ರಶ್ನಿಸಲಾಗಿತ್ತು.ಸಂಹಿತೆಯ 195 ನೇ ಪ್ರಕರಣದ (4) ನೇ ಉಪ-ಪ್ರಕರಣದಲ್ಲಿರುವ ಉಪಬಂಧದ ಅಭಿಪ್ರಾಯದ ಕಾರಣದಿಂದ, ಅಪಿಲಲು ಸಮರ್ಥನೀಯವಲ್ಲವೆಂದು ಮತ್ತು ಸಿವಿಲ್ ನ್ಯಾಯಾಲಯಗಳ ಅಧಿನಿಯಮದಲ್ಲಿ ಉಲ್ಲೇಖಿಸಿದ ಅಪೀಲು ನ್ಯಾಯಾಲಯದಲ್ಲಿ ಸಮರ್ಥನೀಯವಾಗಿತ್ತೆಂಬುದು ಸತ್ರ ನ್ಯಾಯಾಲಯಕ್ಕೆ ಕಂಡುಬಂದಿತು.ಈ ನಿರ್ಣಯವನ್ನು, ಸಂವಿಧಾನದ 227 ನೇ ಅನುಚ್ಛೇದದ ಅಡಿಯಲ್ಲಿ ಈ ನ್ಯಾಯಾಲಯದಲ್ಲಿ ಸಲ್ಲಿಸಿದ ಅರ್ಜಿಯಲ್ಲಿ ಪ್ರಶ್ನಿಸಲಾಗಿತ್ತು.ಮಾನ್ಯ ಸತ್ರ ನ್ಯಾಯಾಧೀಶರ ಆದೇಶವನ್ನು ಮಾನ್ಯ ನ್ಯಾಯಾಧೀಶರು ಸ್ಥಿರೀಕರಿಸಿದರು.

16. ಕ್ರಿಮಿನಲ್ ನ್ಯಾಯಾಲಯಗಳ ವ್ಯವಹಾರ ನಿಯಮಗಳ 66 ನೇ ನಿಯಮವು, ದಂಡ ಪ್ರಕ್ರಿಯಾ ಸಂಹಿತೆಯ 340 ನೇ ಪ್ರಕರಣದ ಅಡಿಯಲ್ಲಿ ಸಲ್ಲಿಸಿದ ಅರ್ಜಿಯನ್ನು ಕ್ರಿಮಿನಲ್ ಸಂಕೀರ್ಣ ಅರ್ಜಿಯನ್ನಾಗಿ ದಾಖಲಿಸತಕ್ಕದ್ದು ಎಂದು ಉಪಬಂಧಿಸಿದೆ ಎಂಬುದು ನಿಜ. ಶ್ರೀ ವಿಪಿನ್ ನಾರಾಯಣ್, ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು, ಇದು ಕ್ರಿಮಿನಲ್ ವ್ಯವಹರಣೆಯಾಗಿರುವುದರಿಂದ, ದಂಡ ಪ್ರಕ್ರಿಯಾ ಸಂಹಿತೆಯ 340 ನೇ ಪ್ರಕರಣದ ಅಡಿಯಲ್ಲಿ ಸಲ್ಲಿಸಿದ ಅರ್ಜಿಗೆ ಸಹ ಇದು ಅನ್ವಯವಾಗುತ್ತದೆ ಎಂದು ನಿವೇದಿಸಿಕೊಂಡಿದ್ದಾರೆ.ಕೇರಳ ಕ್ರಿಮಿನಲ್ ನ್ಯಾಯಾಲಯಗಳ ವ್ಯವಹಾರ ನಿಯಮಗಳನ್ನು, ಮುಖ್ಯವಾಗಿ ಸಂವಿಧಾನದ 227 ನೆ ಅನುಚ್ಛೇದ ಮತ್ತು ದಂಡ ಪ್ರಕ್ರಿಯಾ ಸಂಹಿತೆಯ 447 ನೇ ಪ್ರಕರಣವು ಉಚ್ಚ ನ್ಯಾಯಾಲಯಕ್ಕೆ ಪ್ರದತ್ತಗೊಳಿಸಿದ ಅಧಿಕಾರಗಳನ್ನು ಚಲಾಯಿಸಿ ಕೇರಳ ರಾಜ್ಯಪಾಲರ ಪೂರ್ವಾನುಮೋದನೆಯೊಂದಿಗೆ ಉಚ್ಚ ನ್ಯಾಯಾಲಯವು ರಚಿಸಿದೆ.ಇದನ್ನು " ರಾಜ್ಯದಲ್ಲಿನ ಎಲ್ಲಾ ಕ್ರಿಮಿನಲ್

ನ್ಯಾಯಾಲಯಗಳ ಮಾರ್ಗದರ್ಶನಕ್ಕಾಗಿ " ರಚಿಸಲಾಗಿದೆ.ಇದರಲ್ಲಿನ ಯಾವುದೇ ಉಪಬಂಧವು, ಕ್ರಿಮಿನಲ್ ನ್ಯಾಯಾಲಯವನ್ನು ಹೊರತುಪಡಿಸಿ ಇನ್ನಾವುದೇ ನ್ಯಾಯಾಲಯದಲ್ಲಿನ ವ್ಯವಹರಣೆಗೆ ಅನ್ವಯವಾಗುವುದಿಲ್ಲ.ಮಾನ್ಯ ನ್ಯಾಯವಾದಿಗಳು ನಿವೇದಿಸಿಕೊಂಡಿರುವುದೇನೆಂದರೆ, ದಂಡ ಪ್ರಕ್ರಿಯಾ ಸಂಹಿತೆಯ 195 ನೇ ಪ್ರಕರಣದ ( 4) ನೇ ಉಪ-ಪ್ರಕರಣವು ಅಪೀಲನ್ನು ಸಲ್ಲಿಸಬೇಕಾದ ವೇದಿಕೆಯನ್ನು ನಿರ್ಧರಿಸಲು ಮತ್ತು ಅಧಿವಿಚಾರಣಾ ನ್ಯಾಯಾಲಯವನ್ನು ಸ್ಪಷ್ಟಪಡಿಸಲು ಮಾತ್ರವೇ ಇದೆ. ಮುಂದುವರಿದು ಅವರು, ಅಪೀಲು ಅಧಿಕಾರವ್ಯಾಪ್ತಿಯ ಹಂಚಿಕೆಯು ಕ್ರಿಮಿನಲ್ ಮತ್ತು ಸಿವಿಲ್ ನ್ಯಾಯಾಲಯಗಳಿಗೆ ಬೇರೆ ಬೇರೆಯಾಗಿದೆ ಎಂದು ನಿವೇದಿಸಿಕೊಂಡಿದ್ದಾರೆ.

17. ದಂಡ ಪ್ರಕ್ರಿಯಾ ಸಂಹಿತೆಯ 340 ನೇ ಪ್ರಕರಣದ ಅಡಿಯಲ್ಲಿನ ವ್ಯವಹರಣೆಗಳಲ್ಲಿ, ಸಂಹಿತೆಯ 195 ನೇ ಪ್ರಕರಣದ (1) ನೇ ಉಪ ಪ್ರಕರಣದ (ಬಿ) ಖಂಡದಲ್ಲಿ ಉಲ್ಲೇಖಿಸಿದ ಅಪರಾಧಗಳಲ್ಲಿ ಒಂದು ಅಪರಾಧಕ್ಕಾಗಿ ದಂಡ ಪ್ರಕ್ರಿಯಾ ಸಂಹಿತೆಯ 195 ನೇ ಪ್ರಕರಣದ ಅಡಿಯಲ್ಲಿ ನ್ಯಾಯಾಲಯಕ್ಕೆ ದೂರನ್ನು ಸಲ್ಲಿಸಲು ಮನವಿಯನ್ನು ಮಾಡಿಕೊಳ್ಳಲಾಗಿದೆ.ಇದು ದೂರಲ್ಲ.ಇದರಲ್ಲಿ, ವಿಚಾರಣೆ ನಡೆಸುವುದು ನ್ಯಾಯದ ಹಿತಾಸಕ್ತಿಯಲ್ಲಿ ವಿಹಿತವೇ ಎಂಬುದನ್ನು ನ್ಯಾಯಾಲಯವು ಪರಿಗಣಿಸಿದೆ.ವಿಚಾರಣೆಯ ನಂತರ, ದೂರನ್ನು ಸಲ್ಲಿಸುವುದು ಅದಕ್ಕೆ ಸೂಕ್ತವೆನಿಸಿದರೆ, ಅದು ಹಾಗೆ ಮಾಡಬಹುದು.ಅರ್ಜಿಯನ್ನು ಯಾವ ಸಿವಿಲ್ ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆಯೋ ಅದು ಕ್ರಿಮಿನಲ್ ನ್ಯಾಯಾಲಯವಾಗುವುದಿಲ್ಲ ಮತ್ತು ಅದರ ವ್ಯವಹರಣೆಗಳು ಕ್ರಿಮಿನಲ್ ವ್ಯವಹರಣೆಗಳಾಗುವುದಿಲ್ಲ.

18. ಸಂಹಿತೆಯ 340 ನೇ ಪ್ರಕರಣದ ಅಡಿಯಲ್ಲಿನ ವ್ಯವಹರಣೆಗಳು ಕ್ರಿಮಿನಲ್ ಸ್ವರೂಪದವುಗಳಾಗಿವೆ ಎಂದು ಪರಿಭಾವಿಸಿದರೂ ಸಹ, ಅದು ಕ್ರಿಮಿನಲ್ ನ್ಯಾಯಾಲಯದಲ್ಲಿ ಅದನ್ನು ವ್ಯವಹರಣೆಗಳನ್ನಾಗಿ ಪರಿಗಣಿಸುವುದಿಲ್ಲ.ಸಂಹಿತೆಯ 345 ನೇ ಪ್ರಕರಣವು, ಕೆಲವು ನಿಂದನಾ ಮೊಕದ್ದಮೆಗಳಲ್ಲಿ ಅಪರಾಧವನ್ನು ನಿರ್ಣಯಿಸಿ, ಅಪರಾಧಿಗೆ ಶಿಕ್ಷೆ ಎ ವಿಧಿಸಲು ಸಿವಿಲ್ ನ್ಯಾಯಾಲಯಕ್ಕೆ ಅಧಿಕಾರ ನೀಡುತ್ತದೆ.ಸಂಹಿತೆಯಲ್ಲಿ ಏನೇ ಇದ್ದರೂ, ಶಿಕ್ಷೆ ವಿಧಿಸುವ ನ್ಯಾಯಾಲಯದಲ್ಲಿ ಎ ಹೊರಡಿಸಲಾದ ಡಿಗ್ರಿಗಳ ಅಥವಾ ಅಥವಾ ಆದೇಶಗಳ ಮೇರೆಗೆ ಸಾಮಾನ್ಯವಾಗಿ ಯಾವ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಲಾಗುತ್ತದೆಯೋ ಆ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಬಹುದು ಎಂಬುದಾಗಿ 351 ನೇ ಪ್ರಕರಣವು ಉಪಬಂಧಿಸುತ್ತದೆ.ಇದು, ಸಿವಿಲ್ ನ್ಯಾಯಾಲಯದ ಆದೇಶದಿಂದ ಉದ್ಭವಿಸಿರುವ ಅಪೀಲನ್ನು ದಂಡ ಪ್ರಕ್ರಿಯಾ ಸ ಂ ಹಿತೆಯ ಉಪ ಬ ಂ ಧದ ಅಡಿಯಲ್ಲಿ ಸಲ್ಲಿಸಬಹುದಾಗಿರುವ ಸಂದರ್ಭವನ್ನು ಕುರಿತು ದಂಡ ಪ್ರಕ್ರಿಯಾ ಸಂಹಿತೆಯು ಪರ್ಯಾಲೋಚಿಸುವುದಿಲ್ಲ ಎಂಬ ನಿರ್ಣಯಕ್ಕೆ ಬರಲು ಅವಕಾಶ ಕಲ್ಪಿಸುತ್ತದೆ.

19. ರಾಕಿ -ವಿರುದ್ಧ-ಪವುಣ್ಣಿ (ಮೇಲೆ ಹೇಳಿದ) ಮೊಕದ್ದಮೆಯಲ್ಲಿ ಮಾನ್ಯ ನ್ಯಾಯಮೂರ್ತಿ ಶ್ರೀ ಉಬೇದ್, ಮಾನ್ಯ ಏಕಪೀಠ ನ್ಯಾಯಾಧೀಶರು; ಹರಿಶಂಕರ್ -ವಿರುದ್ಧ ಖ್ಯಾಲಿಚಂದ್ರ (ಮೇಲೆ ಹೇಳಿದ) ಮೊಕದ್ದಮೆಯಲ್ಲಿ ಮಧ್ಯಪ್ರದೇಶ ಉಚ್ಚ ನ್ಯಾಯಾಲಯ ಮತ್ತು ಸುಭಾಷ್ -ವಿರುದ್ಧ ರಾಜಸ್ಥಾನ ರಾಜ್ಯ (ಮೇಲೆ ಹೇಳಿದ) ಮೊಕದ್ದಮೆಯಲ್ಲಿ ರಾಜಸ್ಥಾನ ಉಚ್ಚ ನ್ಯಾಯಾಲಯ ನೀಡಿದ ಅಭಿಪ್ರಾಯಗಳನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ.ದಂಡ ಪ್ರಕ್ರಿಯಾ ಸಂಹಿತೆಯ 340 ನೇ ಪ್ರಕರಣದ ಅಡಿಯಲ್ಲಿ ಸಿವಿಲ್ ನ್ಯಾಯಾಲಯದಲ್ಲಿ ಸಲ್ಲಿಸಿದ ಅರ್ಜಿಯನ್ನು ವಾದಕಾಲೀನ ಅರ್ಜಿಯನ್ನಾಗಿ ನೋಂದಾಯಿಸತಕ್ಕದ್ದು.ಅಂಥ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿ ಸಲ್ಲಿಸಿದ ಅಪೀಲು, ಯಾವ ನ್ಯಾಯಾಲಯದ ಡಿಗ್ರಿಗಳ ಅಥವಾ ಆದೇಶಗಳ ವಿರುದ್ಧ ಅಪೀಲುಗಳನ್ನು ಸಲ್ಲಿಸಲಾಗಿದೆಯೋ ಅಂಥ ನ್ಯಾಯಾಲಯದಲ್ಲಿ ಮಾತ್ರವೇ ಸಿವಿಲ್ ನ್ಯಾಯಾಲಯದ ಉಪಬಂಧಗಳ ಮೇರೆಗೆ ಸಲ್ಲಿಸಬಹುದಾಗಿದೆ.ಸಿವಿಲ್ ಅಪೀಲು ನ್ಯಾಯಾಲಯದ ಆದೇಶವನ್ನು ಸಂಹಿತೆಯ 482 ನೇ ಪ್ರಕರಣದ ಅಡಿಯಲ್ಲಿ ಪ್ರಶ್ನಿಸಲಾಗುವುದಿಲ್ಲ.ಈ ನ್ಯಾಯಾಲಯದ ರಿಜಿಸ್ಟ್ರಿಯವರು ಎತ್ತಿದ ಆಕ್ಷೇಪಣೆಯನ್ನು ಎತ್ತಿಹಿಡಿಯಲಾಗಿದೆ."

6. ಇದಕ್ಕೆ ತದ್ವಿರುದ್ಧವಾಗಿ, ಮೊದಲನೇ ಎದುರುದಾರರ ಪರ ಮಾನ್ಯ ನ್ಯಾಯವಾದಿ ಶ್ರೀಮತಿ ಚಂದ್ರಕಲಾ ಅವರು, ಈ ನ್ಯಾಯಾಲಯದ ಮುಂದೆ ಅರ್ಜಿಯನ್ನು ಸಮರ್ಥಿಸಲಾಗುವುದಿಲ್ಲವೆಂದು ನಿವೇದಿಸಿಕೊಂಡಿದ್ದಾರೆ.ಮಾನ್ಯ ಉಚ್ಚ ನ್ಯಾಯಾಲಯದ ಸರ್ಕಾರಿ ಪ್ಲೀಡರ್ ಅವರು ಸಹ, ದಂಡ ಚ ಪ್ರಕ್ರಿಯಾ ಸಂಹಿತೆಯ 482 ನೇ ಪ್ರಕರಣದ ಅಡಿಯಲ್ಲಿನ ಅರ್ಜಿಯು ಸಮರ್ಥನೀಯವಲ್ಲವೆಂದು ಅಭಿಪ್ರಾಯಪಟ್ಟಿದ್ದಾರೆ.

7. ವಿಷಯಕ್ಕೆ ಸಂಬಂಧಿಸಿದ ವಾಸ್ತವಿಕ ಸಂಗತಿಗಳ ಹಿನ್ನೆಲೆಯಲ್ಲಿ, ಈ ನ್ಯಾಯಾಲಯದ ಮುಂದೆ ಪರಿಗಣನೆಗಾಗಿ ಉದ್ಭವಿಸುವಂಥ ಅಂಶವೆಂದರೆ:

" ದಂಡ ಪ್ರಕ್ರಿಯಾ ಸಂಹಿತೆಯ 340 ನೇ ಪ್ರಕರಣದ ಅಡಿಯಲ್ಲಿ ಈ ನ್ಯಾಯಾಲಯದಲ್ಲಿ ನಿಹಿತವಾದ ಅಧಿಕಾರವನ್ನು ಅವಲಂಬಿಸಿ, ದಂಡ ಪ್ರಕ್ರಿಯಾ ಸಂಹಿತೆಯ 195 ನೇ ಪ್ರಕರಣದ ಅಡಿಯಲ್ಲಿ ದಂಡನೀಯವಾದ ಅಪರಾಧಕ್ಕಾಗಿ ಕ್ರಮ ತೆಗೆದುಕೊಳ್ಳಲು ಅಧಿಕಾರ ವ್ಯಾಪ್ತಿಯುಳ್ಳ ಮ್ಯಾಜಿಸ್ಟ್ರೇಟರಿಗೆ ವಿಷಯವನ್ನು ಉಲ್ಲೇಖಿಸಲು ಕೋರಿ ಸಲ್ಲಿಸಿದ ಅರ್ಜಿಯನ್ನು ವಜಾಗೊಳಿಸಿದ್ದರೆ, ಅದು ದಂಡ ಪಕ್ರಿಯಾ ಸಂಹಿತೆಯ 482 ನೇ ಪ್ರಕರಣದ ಅಡಿಯಲ್ಲಿ ಈ ನ್ಯಾಯಾಲಯದ ಅಧಿಕಾರವ್ಯಾಪ್ತಿಗೆ ಒಳಪಡುತ್ತದೆಯೇ? "

8. ಈ ಮುಂದಿನ ಕಾರಣಗಳಿಗಾಗಿ ಮೇಲಿನ ಅಂಶಕ್ಕೆ ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

9. ಪಕ್ಷಕಾರರ ವಾದಗಳನ್ನು ಆಲಿಸಲಾಯಿತು ಮತ್ತು ಮೇಲೆ ಉಲ್ಲೇಖಿಸಿದ ಶಿಬು ಜಾರ್ಜ್ ಮೊಕದ್ದಮೆಯ ತೀರ್ಪನ್ನು ಅವಲೋಕಿಸಲಾಯಿತು, ಅದರಲ್ಲಿ ಕೇರಳ ಉಚ್ಚ ನ್ಯಾಯಾಲಯವು, ಈ ಕ್ಷೇತ್ರವನ್ನು ಒಳಗೊಳ್ಳುವ ಬಹುತೇಕ ಎಲ್ಲಾ ತೀರ್ಪುಗಳನ್ನು ಉಲ್ಲೇಖಿಸಿದ ನಂತರ, ಮೊಕದ್ದಮೆಯ ಸಂಗತಿಗಳ ಮತ್ತು ಸಂದರ್ಭಗಳ ಹಿನ್ನೆಲೆಯಲ್ಲಿ ನ್ಯಾಯಾಲಯ ವಿಷಯವನ್ನು ಪರಿಗಣಿಸಿದಾಗಲೆಲ್ಲಾ, ದಂಡ ಪ್ರಕ್ರಿಯಾ ಸಂಹಿತೆಯ 195 ನೇ ಪ್ರಕರಣದ ಅಡಿಯಲ್ಲಿ ದಂಡನೀಯ ಅಪರಾಧದ ಸಂಬಂಧದಲ್ಲಿ ಯಾವುದೇ ವಾದವನ್ನು ಮಾಡಲಾಗದಿದ್ದರೆ ಮತ್ತು ಅಧಿಕಾರವ್ಯಾಪ್ತಿಯುಳ್ಳ ದಂಡಾಧಿಕಾರಿಗೆ ವಿಷಯವನ್ನು ಉಲ್ಲೇಖಿಸಲು ನಿರಾಕರಿಸಿದರೆ, ದಂಡ ಪ್ರಕ್ರಿಯಾ ಸಂಹಿತೆಯ 482 ನೇ ಪ್ರಕರಣದ ಅಡಿಯಲ್ಲಿ ಉಚ್ಚ ನ್ಯಾಯಾಲಯದ ಅಧಿಕಾರವ್ಯಾಪ್ತಿಗೆ ಅಂಥ ಆದೇಶವು ಒಳಪಡುವುದಿಲ್ಲವೆಂದು ಸ್ಪಷ್ಟವಾಗಿ ಅಭಿಪ್ರಾಯಪಟ್ಟಿದೆ.ಮೇಲೆ ಉಲ್ಲೇಖಿಸಿದ ಶಿಬು ಜಾರ್ಜ್ ಮೊಕದ್ದಮೆಯಲ್ಲಿ ಅವಲಂಬಿಸಿದ ತೀರ್ಪುಗಳಿಂದ ಕಂಡುಬರುವಂತೆ, ಪ್ರತಿಯೊಂದು ನ್ಯಾಯಾಲಯವು, ಸುಳ್ಳು ಸಾಕ್ಷ್ಯಕ್ಕಾಗಿ ಕ್ರಮ ತೆಗೆದುಕೊಳ್ಳುವುದಕ್ಕೆಂದು ಅಧಿಕಾರವ್ಯಾಪ್ತಿಯುಳ್ಳ ದಂಡಾಧಿಕಾರಿಗೆ ವಿಷಯವನ್ನು ಉಲ್ಲೇಖಿಸಿದಾಗ, ಅಂಥ ನ್ಯಾಯಾಲಯವನ್ನು ಕ್ರಿಮಿನಲ್ ನ್ಯಾಯಾಲಯವೆಂದು ಪರಿಭಾವಿಸಬೇಕಾಗುವುದು ಹಾಗೂ ಹಾಗೆ ಉಲ್ಲೇಖಿಸಿದ ವ್ಯಾಪ್ತಿಯಷ್ಟರಮಟ್ಟಿಗೆ ಅದು ಕ್ರಿಮಿನಲ್ ನ್ಯಾಯಾಲಯದ ಅಧಿಕಾರಗಳನ್ನು ಹೊಂದುವುದು ಎಂಬುದು ತಿಳಿದುಬರುತ್ತದೆ.ಆದರೆ, ಸುಳ್ಳು ಸಾಕ್ಷ್ಯಕ್ಕಾಗಿ ಕ್ರಮ ತೆಗೆದುಕೊಳ್ಳಲು ಅಧಿಕಾರ ವ್ಯಾಪ್ತಿಯುಳ್ಳ ದಂಡಾಧಿಕಾರಿಗೆ ಉಲ್ಲೇಖ ಕೋರಿ ದಂಡ ಪ್ರಕ್ರಿಯಾ ಸಂಹಿತೆಯ 340 ನೇ ಪ್ರಕರಣದ ಅಡಿಯಲ್ಲಿ ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಲು ನ್ಯಾಯಾಲಯವು ನಿರಾಕರಿಸಿದಾಗ, ಅಂಥ ಆದೇಶವನ್ನು ಕ್ರಿಮಿನಲ್ ಅಧಿಕಾರ ವ್ಯಾಪ್ತಿಯ ಅಡಿಯಲ್ಲಿ ಹೊರಡಿಸಿದ ಆದೇಶವೆಂದು ಪರಿಗಣಿಸಲಾಗುವುದಿಲ್ಲ.

10. ಶೀಬು ಜಾರ್ಜ್ (ಮೇಲೆ ಹೇಳದ) ಮೊಕದ್ದಮೆಯಲ್ಲಿ ನಿರೂಪಿಸಿದ ಕಾನೂನು ತತ್ತ್ವಗಳ ಹಿನ್ನೆಲೆಯಲ್ಲಿ, ಒ. ಎಸ್.ಸಂಖ್ಯೆ: 106/2011 ರಲ್ಲಿ ಅಧಿವಿಚಾರಣಾ ನ್ಯಾಯಾಲಯವು ದಂಡ ಪ್ರಕ್ರಿಯಾ ಸಂಹಿತೆಯ 340 ನೇ ಪ್ರಕರಣದ ಅಡಿಯಲ್ಲಿ ಸಲ್ಲಿಸಿದ ಮಧ್ಯಂತರ ಅರ್ಜಿಸಂಖ್ಯೆ: XI ನ್ನು ತಿರಸ್ಕರಿಸಿ ಹೊರಡಿಸಿದ ಆದೇಶವನ್ನು, ದಂಡ ಪ್ರಕ್ರಿಯಾ ಸಂಹಿತೆಯ ಉಪಬಂಧಗಳ ಅಡಿಯಲ್ಲಿ ನ್ಯಾಯಾಲಯಕ್ಕೆ ನಿಹಿತವಾದ ಅಧಿಕಾರಗಳನ್ನಾಧರಿಸಿ ಯಾವುದೇ ಆದೇಶವನ್ನು ಹೊರಡಿಸಿರಲಿಲ್ಲ ಎಂಬಷ್ಟರಮಟ್ಟಿಗೆ, ದಂಡ ಪ್ರಕ್ರಿಯಾ ಸಂಹಿತೆಯ 482 ನೇ ಪ್ರಕರಣದ ಅಡಿಯಲ್ಲಿ ಈ ನ್ಯಾಯಾಲಯದ ಮುಂದೆ ಪ್ರಶ್ನಿಸಲಾಗುವುದಿಲ್ಲವೆಂಬುದು ಈ ನ್ಯಾಯಾಲಯದ ಪರಿಗಣಿತ ಅಭಿಪ್ರಾಯವಾಗಿದೆ.

11. ಕ್ರಿಮಿನಲ್ ನ್ಯಾಯಾಲಯವು ಹೊರಡಿಸಿದ ಯಾವುದೇ ಆದೇಶವು, ದಂಡ ಪಕ್ರಿಯಾ ಸಂಹಿತೆಯ 482 ನೇ ಪ್ರಕರಣದ ಅಡಿಯಲ್ಲಿ ಮಾತ್ರವೇ ಈ ನ್ಯಾಯಾಲಯದ ಅಧಿಕಾರವ್ಯಾಪ್ತಿಗೆ ಒಳಪಡುವುದು ಎಂಬ ವಿಷಯಕ್ಕೆ ಒತ್ತು ನೀಡುವುದು ಅನವಶ್ಯಕ.ತದನುಸಾರವಾಗಿ, ಮಧ್ಯಂತರ ಅರ್ಜಿಸಂಖ್ಯೆ: XI ನ್ನು ತಿರಸ್ಕರಿಸಿರುವುದನ್ನು, ಅಧಿವಿಚಾರಣಾ ನ್ಯಾಯಾಲಯದ ಕ್ರಿಮಿನಲ್ ಅಧಿಕಾರವ್ಯಾಪ್ತಿಯನ್ನು ಚಲಾಯಿಸಿ ಹೊರಡಿಸಲಾಗಿರುವ ಆದೇಶವೆಂದು ಪರಿಗಣಿಸಲಾಗುವುದಿಲ್ಲ.

12. ಮೇಲಿನ ಚರ್ಚೆಯ ಹಿನ್ನೆಲೆಯಲ್ಲಿ, ಈ ಅಂಶಕ್ಕೆ ನಕಾರಾತ್ಮಕವಾಗಿ ಉತ್ತರಿಸಲಾಗಿದೆ ಮತ್ತು ಈ ಮುಂದಿನ ಆದೇಶವನ್ನು ಹೊರಡಿಸಲಾಗಿದೆ:

ಆದೇಶ

ಅರ್ಜಿಯನ್ನು ಸಮರ್ಥನೀಯವಲ್ಲವೆಂದು ಪರಿಗಣಿಸಿ ವಜಾ ಮಾಡಲಾಗಿದೆ.

ಆದಾಗ್ಯೂ, ಪ್ರಶ್ನಿತ ಆದೇಶದ ಸರಿತನಕ್ಕೆ ಸಂಬಂಧಪಡುವಷ್ಟರಮಟ್ಟಿಗೆ, ಅರ್ಜಿದಾರನಿಗೆ ಲಭ್ಯವಿರಬಹುದಾದ ಇತರ ಪರಿಹಾರಗಳನ್ನು ಪಡೆಯಲು ಆತನನ್ನು ಇದು ಅನರ್ಹಗೊಳಿಸುವುದಿಲ್ಲ.

ಪ್ರಮಾಣಿತ ಪ್ರತಿಗಳ ಫೋಟೋ ಪ್ರತಿಗಳನ್ನು ಇರಿಸಿಕೊಂಡ ನಂತರ, ಅವುಗಳನ್ನು ಅರ್ಜಿದಾರನಿಗೆ ಹಿಂತಿರುಗಿಸಲು ಕಚೇರಿಗೆ ನಿರ್ದೇಶಿಸಲಾಗಿದೆ.